

ಲೋಕದಲ್ಲಿ ಎಷ್ಟು ಪಕ್ಷಗಳು? ಕುಮಾರವ್ಯಾಸ ಕವಿಯ ಪ್ರಕಾರ ಎರಡೇ ಪಕ್ಷ! ಒಂದು, ಪಿತೃ ಪಕ್ಷ. ಮತ್ತೊಂದು ಮಾತೃ ಪಕ್ಷ. 'ವಿಪಕ್ಷ ತಂದೆಯ ದೆಸೆ, ಸಪಕ್ಷವು ತಾಯ ದೆಸೆಯವರು' ಎನ್ನುತ್ತಾನೆ 'ಕರ್ಣಾಟ ಭಾರತ ಕಥಾಮಂಜರಿ'ಯ ಕವಿ.

ರವಿ ಕಾಣದ್ದನ್ನು ಕವಿ ಕಂಡ ಎನ್ನುವ ಮಾತು ಅರ್ಥ ಪಡೆದುಕೊಳ್ಳುವುದು ಇಂಥ ಸಂದರ್ಭಗಳಲ್ಲೇ ಇರಬೇಕು. ಬಹು ದೊಡ್ಡ ಸತ್ಯಗಳನ್ನು ಕವಿ ಅತ್ಯಂತ ಸಹಜವಾಗಿ ಹೇಳಿಬಿಡುತ್ತಾನೆ. ಕುಮಾರವ್ಯಾಸನ ಮಾತನ್ನೇ ನೋಡಿ, ನಮ್ಮೆಲ್ಲರದೂ ಆಗಿರಬಹುದಾದ, ಆದರೆ ಅಸ್ಪಷ್ಟ ಅನುಭವವಾಗಿ ಉಳಿದ ಸಂಗತಿಯೊಂದನ್ನು ಕವಿ ಬಹು ಸಹಜವಾಗಿ ಹೇಳುತ್ತಿದ್ದಾನೆ. ಕವಿಯ ಮಾತಿಗೆ ನಿದರ್ಶನವಾಗಿ ಯಾವುದೇ ಕುಟುಂಬವನ್ನು ಗಮನಿಸಿ: ಅಲ್ಲಿ ಆಡಳಿತ ಪಕ್ಷ ಅಮ್ಮ–ಮಕ್ಕಳದೇ ಆಗಿರುತ್ತದೆ. ಅಪ್ಪ ವಿರೋಧ ಪಕ್ಷ – ಬಹುತೇಕ ಸಂದರ್ಭಗಳಲ್ಲಿ ಒಬ್ಬಂಟಿ!

ಅಮ್ಮನೊಂದಿಗಿನ ನಂಟು ಗರ್ಭದಿಂದಲೇ ಆರಂಭವಾಗುತ್ತದೆ. ಎದೆಹಾಲಿನೊಂದಿಗೆ ಮಾತೃಪ್ರೇಮ ಮೈಗೂಡುತ್ತದೆ. ಪಾಲನೆ ಪೋಷಣೆಯೊಂದಿಗೆ ಅಮ್ಮ ಮತ್ತಷ್ಟು ಮತ್ತಷ್ಟು ಹತ್ತಿರವಾಗುತ್ತಲೇ ಹೋಗುತ್ತಾಳೆ. ಕರುಳಕುಡಿ ಎನ್ನುವುದು ಅಮ್ಮನ ಮಾತಿಗೆ ಬರಿಯ ಭಾವುಕತೆಯಲ್ಲ; ಅದು ಅಕ್ಷರಶಃ ವಾಸ್ತವ. ಈ ಭಾಗ್ಯ ಅಪ್ಪನಿಗಿಲ್ಲ. ಹೆಣ್ಣಿನಂತೆ ಮಗುವನ್ನು ಒಡಲಲ್ಲಿಟ್ಟುಕೊಳ್ಳುವ ಅವಕಾಶ ಗಂಡಿಗಿಲ್ಲ. ಹಾಲುಣಿಸುವ ಅನುಭೂತಿಯೂ ಇಲ್ಲ. ಅಪ್ಪನ ಮಡಿಲಿಗೆ ಮಗುವಿಗೆ ಮೆತ್ತೆಯಾಗುವ ನಾಜೂಕುತನವೂ ಇಲ್ಲ. ಇವೆಲ್ಲ ಕಾರಣದಿಂದಲೇ ಮಕ್ಕಳ ಪಾಲಿಗೆ ಅಮ್ಮ ಮೊದಲ ಆದ್ಯತೆ. ಅಪ್ಪನೇನಿದ್ದರೂ ಎರಡನೆಯವನು.

ಮಗುವಿನ ಜನನದೊಂದಿಗೆ ಅಮ್ಮ–ಅಪ್ಪನೂ ಹುಟ್ಟುತ್ತಾರಷ್ಟೇ. ಆದರೆ, ಹೆಣ್ಣಿಗೆ ಸಹಜವಾಗಿ ಸಿದ್ಧಿಸುವ ಮಾತೃತ್ವದಂತೆ, ಗಂಡಿಗೆ ಪಿತೃತ್ವ ದೊರೆಯುವುದು ಸುಲಭವಲ್ಲ. 'ಇದೋ ಇವರು ನಿನ್ನಪ್ಪ' ಎಂದು ಅಮ್ಮ ಕೂಸಿಗೆ ಅಪ್ಪನನ್ನು ಪರಿಚಯಿಸಬೇಕು. ಆ ಪರಿಚಯವನ್ನು ನವೀಕರಿಸಿಕೊಳ್ಳಲು ಗಂಡು ಸಾಕಷ್ಟು ಕಸರತ್ತು ಮಾಡಬೇಕು. ಏನೆಲ್ಲ ಪ್ರಯತ್ನದ ನಂತರವೂ ಅಪ್ಪ ವಿಪಕ್ಷವೇ, ಅಮ್ಮ ಸಪಕ್ಷವೇ!

ಆಧುನಿಕ ಸಂದರ್ಭದಲ್ಲಂತೂ 'ಅಪ್ಪ'ನ ಪಾತ್ರ ಮತ್ತಷ್ಟು ಸಂಕೀರ್ಣವಾದುದು. ಸ್ಪರ್ಧಾತ್ಮಕ ಜಗತ್ತಿನಲ್ಲಿ ದುಡಿಮೆಯ ಸ್ವರೂಪ ಬದಲಾಗಿರುವುದರಿಂದ, ಗಂಡು ಕಚೇರಿಯಲ್ಲಿ ಹೆಚ್ಚು ಸಮಯ ಉಳಿಯಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮನೆಯೂ ಕಚೇರಿಯಾಗಿಬಿಡುತ್ತದೆ. ಮಕ್ಕಳೊಂದಿಗೆ ಅಪ್ಪ ಕಳೆಯುವ ಸಮಯ ಕಡಿಮೆಯಾದಂತೆಲ್ಲ, ಇಬ್ಬರ ನಡುವಣ ಅಂತರವೂ ಹೆಚ್ಚುತ್ತಾ ಹೋಗುತ್ತದೆ. ಪಾಳಿಗಳಲ್ಲಿ ಕೆಲಸ ಮಾಡುವ ಅಪ್ಪಂದಿರಂತೂ ಮಕ್ಕಳಿಗೆ ರಜೆ ದಿನಗಳಲ್ಲಷ್ಟೇ ಮುಖ ತೋರಿಸುವವರು. ಇದಕ್ಕೆ ಬದಲಾಗಿ, ಅಮ್ಮ ಮಕ್ಕಳಿಗೆ ಸುಲಭ ಲಭ್ಯಳು. ಮಕ್ಕಳ ತವಕ ತಲ್ಲಣಗಳಿಗೆ, ಅಳು ನಗುವಿಗೆ, ಮುನಿಸಿಗೆ, ಆಟ–ಪಾಠಕ್ಕೆ ಮೊದಲು ಸ್ಪಂದಿಸುವುದು ಅಮ್ಮನೇ.

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ 'ಮುಂಬೈ ಜಾತಕ' ಕವಿತೆ, ಮಹಾನಗರವೊಂದರ ನಕಾಶೆಯಷ್ಟೇ ಅಲ್ಲ, ಅದು ಆಧುನಿಕತೆಯ ಗಾಳಕ್ಕೆ ಸಿಕ್ಕ ಜನಜೀವನದ ಜಾತಕವೂ ಹೌದು. ಅಪ್ಪ–ಅಮ್ಮಂದಿರ ಕುರಿತು ಕವಿ ಕಟ್ಟಿಕೊಡುವ ಬಿಂಬಗಳು ನಮ್ಮದೇ ಬದುಕಿನ ಚಿತ್ರಗಳೆಂದು ಅಹುದಹುದೆನ್ನುವಷ್ಟು ಪ್ರಖರವಾಗಿವೆ. ಆ ಚಿತ್ರಣ ಹೀಗಿದೆ:

ತಾಯಿ:
ಸಾವಿರ ಗಾಲಿ ಉರುಳಿ ಹೊರಳುವ ರಸ್ತೆಯಂಚಿನಲ್ಲೇ
ಕೈ ಹಿಡಿದು ನಡೆಸಿದವಳು. ಇರುವ ಒಂದಿಂಚು
ಕೋಣೆಯಲ್ಲೇ ಹೊರಲೋಕವನು ಪರಿಚಯಿಸಿ
ಎಚ್ಚರಿಕೆ ಕೊಟ್ಟವಳು.
ತಂದೆ:
ಬೆಳಗಿನಿಂದ ಸಂಜೆಯ ತನಕ ಕಣ್ಮರೆಯಾಗಿ
ಒಮ್ಮೊಮ್ಮೆ ರಜಾದಿನದಲ್ಲಿ ಕಣ್ಣಿಗೆ ಕಂಡು
ಕುಳಿತು ಕೆಮ್ಮುವ ಪ್ರಾಣಿ.

ಮಕ್ಕಳ ಪಾಲಿಗೆ ಅಮ್ಮ ಕೈಹಿಡಿದು ನಡೆಸುವವಳು ಹಾಗೂ ಲೋಕದರ್ಪಣವಾಗಿದ್ದರೆ, ಅಪ್ಪನೆನ್ನುವವನು ರಜೆದಿನಗಳಲ್ಲಿ ಕಣ್ಣಿಗೆ ಕಂಡು ಕೆಮ್ಮುವ ಪ್ರಾಣಿ – ಕವಿತೆ ಕಟ್ಟಿಕೊಡುವ ಈ ಬಿಂಬಗಳಿಗಿಂತಲೂ ವಾಸ್ತವ ಹೆಚ್ಚು ಭಿನ್ನವೇನೂ ಅಲ್ಲ.

'ಅಪ್ಪ'ನ ಜವಾಬ್ದಾರಿ ಸವಾಲಿನದು. 'ಅಮ್ಮ' ಎನ್ನುವ ಪದಕ್ಕೆ ಇರುವ ಭಾವಸ್ಪಂದನ 'ಅಪ್ಪ' ಎನ್ನುವ ಶಬ್ದಕ್ಕಿಲ್ಲ. ಹಾಗಾಗಿಯೇ, ಪಿತೃತ್ವ ಎನ್ನುವುದು ಪ್ರಜ್ಞಾಪೂರ್ವಕವಾಗಿ ಸಾಧಿಸಬೇಕಾದ ಸಿದ್ಧಿ. ಮಕ್ಕಳಿಗೆ ಅಪ್ಪ ಎಷ್ಟು ಹತ್ತಿರವಾಗುತ್ತಾನೆ ಎನ್ನುವುದರಲ್ಲಿ ಆ ಮಗುವಿನ ಯಶಸ್ಸಷ್ಟೇ ಇರುವುದಿಲ್ಲ, ಅಪ್ಪನ ಯಶಸ್ಸೂ ಇರುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**